ತೋಚಿದ್ದನ್ನೆಲ್ಲಾ ಬರೆದಿದ್ದರಿಂದ ಬೆಳೆಯ ಜೊತೆಗೆ ಕಳೆಯೂ ಬಂದಿರಬಹುದು. ಇಂತಹದ್ದನ್ನೆಲ್ಲಾ ಅವರ ಸಾಮಾಜಿಕ ಕಾದಂಬರಿಗಳಲ್ಲಿ ಕಾಣಬಹುದು. ಆದರೆ, ಐತಿಹಾಸಿಕ ಕಾದಂಬರಿ ರಚನೆ ಹಾಗಲ್ಲವಲ್ಲ. ಅದು ಬೇರೆಯದೇ ಆಯಾಮ, ಶ್ರಮ ಕ್ರಮ, ಅಧ್ಯಯನ ಶಾಸನಗಳ ಪರಿಶೀಲನೆ, ದಾಖಲೆಗಳ ಅಧ್ಯಯನ ಕ್ಷೇತ್ರ ಕಾರ್ಯವನ್ನು ಬಯಸುತ್ತದೆ. ಹೀಗಾಗಿಯೇ ಹೆಚ್ಚು ಪರಿಶ್ರಮವಹಿಸಿ ಬರೆದ ಐತಿಹಾಸಿಕ ಕಾದಂಬರಿಗಳಿಂದಾಗಿಯೇ ತ.ರಾ.ಸು. ಉಳಿದಿದ್ದು, ಬೆಳೆದಿದ್ದು, ನಾಡಿನ ಮನೆ ಮಾತಾಗಿದ್ದು ಎಂದರೆ ಉತ್ಪ್ರೇಕ್ಷೆಯಾಗದು.

ಅವರು ದುರ್ಗದ ಇತಿಹಾಸ ಕುರಿತು ರಚಿಸಿದ 'ಕಂಬನಿಯ ಕುಯಿಲು', 'ರಕ್ತರಾತ್ರಿ', 'ತಿರುಗುಬಾಣ', 'ರಾಜ್ಯದಾಹ', 'ಹೊಸಹಗಲು', 'ವಿಜಯೋತ್ಸವ ಭಾಗ 1 ಮತ್ತು 2', 'ಕಸ್ತೂರಿ ಕಂಕಣ' ಎಲ್ಲವೂ ದುರ್ಗದ ದಳವಾಯಿಯೊಬ್ಬನ ದರ್ಪ ದೌರ್ಜನ್ಯ, ಸರ್ವಾಧಿಕಾರಿ ಧೋರಣೆಯ ವಿಜೃಂಭಣೆಯಾದರೆ, ಬದುಕಿನ ಕೊನೆಯಲ್ಲಿ ರಚಿಸಿದ ಕೊನೆಯ ದೊರೆ ಮದಕರಿನಾಯಕನ ಕುರಿತಾದ 'ದುರ್ಗಾಸ್ತಮಾನ'ದ ತೂಕವೇ ಬೇರೆ. ಅದರ ರಚನೆಯಲ್ಲಿ ತಮ್ಮೆಲ್ಲಾ ಕಸುವು, ಕಲಾತ್ಮಕತೆ, ಅಧ್ಯಯನಶೀಲತೆ, ರೂಪಕತೆ, ರಸೋತ್ಪತ್ತಿ, ಶೃಂಗಾರ, ಯುದ್ಧೋನ್ಮಾದ ಇವೆಲ್ಲವನ್ನೂ 698 ಪುಟಗಳಲ್ಲಿ ಚಿನ್ನದ ನೇಯ್ಗೆಯಲ್ಲೇ ನೇಯ್ದಿದ್ದಾರೆ ಅನಿಸುತ್ತದೆ.

ಇದಕ್ಕಿಂತ ಮೊದಲಿಗೆ ರಚಿಸಿದ 'ಹಂಸಗೀತೆ' ಎಂಬ ಐತಿಹಾಸಿಕ ಕಾದಂಬರಿಯಲ್ಲಿ ಸಂಗೀತಗಾರನೊಬ್ಬನ ದುರಂತ ಬದುಕಿನ ವಾಸ್ತವ ಚಿತ್ರಣವಿದೆ. ಐತಿಹಾಸಿಕ ಕೃತಿಯಾದರೂ ಎಲ್ಲವೂ ಕಾಲ್ಪನಿಕ ವಸ್ತು ಪಾತ್ರಗಳಾದರೂ ಚಾರಿತ್ರಿಕ ವ್ಯಕ್ತಿಗಳಾದ ಹೈದರಾಲಿ, ಟಿಪ್ಪುಸುಲ್ತಾನ್, ಪೂರ್ಣಯ್ಯ, ನಾಯಕರ ಪಾತ್ರಗಳ ಪ್ರವೇಶದಿಂದಾಗಿ ಕಾದಂಬರಿಗೊಂದು ಚಾರಿತ್ರಿಕ ರೂಪ ಪ್ರಾಪ್ತವಾಗುತ್ತದೆ. ವೆಂಕಟಸುಬ್ಬಯ್ಯನೆಂಬ ಸಂಗೀತಗಾರನೊಬ್ಬನಿದ್ದನೆಂದೇ ಓದುಗರನ್ನು ನಂಬಿಸಿ ಬಿಡುತ್ತಾರೆ ತ.ರಾ.ಸು. ಅದೇ ಅಲ್ಲವೇ ಬರಹಗಾರನೊಬ್ಬನ ತಾಕತ್ತು. ಕಥೆಯಲ್ಲಿ ಸಂಗೀತಾಭಿಜಾತ ವೆಂಕಟಸುಬ್ಬಯ್ಯ ಅವನ ಹಿತೈಷಿ ಅನಂತಯ್ಯ, ಗುರು ತಿರುಮಲಯ್ಯ, ಅವನ ಸೋಲು. ಗುರುವನ್ನೇ ಸಂಗೀತ ಸ್ಪರ್ಧೆಯಲ್ಲಿ ಗೆದ್ದ ವೆಂಕಟಸುಬ್ಬಯ್ಯನ ಅಹಂ. ಚಂದ್ರಸಾನಿಯ ಸಂಬಂಧ. ಅವಳ ಅವನ ಪ್ರೇಮ, ಕಾಮ, ಸರಸ ಸಲ್ಲಾಪಗಳು, ಚಂದ್ರಸಾನಿಯಿಂದ ಇವನ ಶ್ರೇಯಸ್ಸಿಗೆ ಪೆಟ್ಟು ಬಿದ್ದೀತೆಂದರಿತ ಅನಂತಯ್ಯ ಅವಳು ವಿಷ ಸೇವಿಸಿ ಸಾವನ್ನಪ್ಪುವಂತೆ ಕುತಂತ್ರ ಮಾಡುತ್ತಾನೆ. ದುರ್ಗದ ಏಳು ಸುತ್ತಿನ ಕೋಟೆ ಟಿಪ್ಪುಸುಲ್ತಾನನ ಕೈವಶವಾದಾಗ ಸುಲ್ತಾನನು ತನ್ನ ಆಸ್ಥಾನಕ್ಕೇ ಬಂದು ಹಾಡೆಂದು ಸಂಗೀತಗಾರನಿಗೆ ಆದೇಶ ನೀಡುತ್ತಾನೆ. ಸ್ವಾಭಿಮಾನಿ ವೆಂಕಟಸುಬ್ಬಯ್ಯನದು ನಾನಿರುವಲ್ಲಿಗೇ ದೊರೆ ಬರಬೇಕೆಂಬ ಆಗ್ರಹ. ಆದರೆ, 'ನಾನು ಕೇವಲ ನನ್ನ ದೊರೆ, ನನ್ನ ದೇವರ ಎದುರಿನಲ್ಲಿ ಮಾತ್ರ ಹಾಡುತ್ತೇನೆಂದು' ಮಾತು ಕೊಟ್ಟಿದ್ದ ವೆಂಕಟಸುಬ್ಬಯ್ಯ ಟಿಪ್ಪು ಎದುರು ಹಾಡಲಾರದೆ, ನಾಲಿಗೆಯನ್ನೇ ಕತ್ತರಿಸಿಕೊಂಡು ಆತ್ಮಾಭಿಮಾನ ತೋರುತ್ತಾನೆ. ಇವೆಲ್ಲವನ್ನೂ ರಸವತ್ತಾಗಿ ನೇಯ್ದಿರುವ ತ.ರಾ.ಸು. ಕಾದಂಬರಿಯಲ್ಲಿ ಗಂಧರ್ವ ಲೋಕವನ್ನೇ ಸೃಷ್ಟಿಸಿದ್ದಾರೆ.

ಬಹಳ ಹಿಂದೆಯೇ 'ಹಂಸಗೀತೆ' ಹಿಂದಿಯಲ್ಲಿ 'ಬಸಂತ್ ಬಹಾರ್' ಹೆಸರಿನಲ್ಲಿ ಸಿನಿಮಾ ಆಗಿತ್ತು. ಅನಂತರ ನಮ್ಮ ಜಿ.ವಿ. ಅಯ್ಯರ್ ಕನ್ನಡದಲ್ಲಿ ಸಿನಿಮಾ ಮಾಡಿದರು. ಅದೂ ಕೂಡ ಏಳು ಸುತ್ತಿನ ಕೋಟೆಯಲ್ಲಿಯೇ. 'ನಾಗರಹಾವು' ಚಿತ್ರಕ್ಕಿಂತ ಹೆಚ್ಚು ಮನೋಜ್ಞವಾಗಿ ದುರ್ಗದ ಕೋಟೆ ಕೊತ್ತಲ, ಬುರುಜುಬತೇರಿ, ಕೆರೆಹೊಂಡ, ದೇವಾಲಯಗಳನ್ನು ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದರು. ಅನಂತನಾಗ್ ಅಭಿನಯಿಸಿದ್ದರು. ಇದೊಂದು ಪ್ರಯೋಗಾತ್ಮಕ ಚಿತ್ರವಾದ್ದರಿಂದ ಜನಮಾನಸವನ್ನು ಗೆಲ್ಲಲಿಲ್ಲವಾದರೂ 'ರಾಷ್ಟ್ರ ಪ್ರಶಸ್ತಿ' ಮುಡಿಗೇರಿಸಿಕೊಂಡ ಹಿರಿಮೆಗೆ ಪಾತ್ರವಾಯಿತು.

ಇನ್ನು 'ಕಂಬನಿಯ ಕುಯಿಲು', 'ರಕ್ತರಾತ್ರಿ', 'ತಿರುಗುಬಾಣ' ಐತಿಹಾಸಿಕ ಕೃತಿಗಳಲ್ಲಿ